ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 1-7
©*IIMRD*, Mysuru
www.iimrd.com

# ಸುಸ್ಥಿರ ಅಭಿವೃದ್ಧಿಗೆ ಸ್ಥಳೀಯ ಜ್ಞಾನದ ಅನ್ವಯಿಕೆ : ತಾತ್ವಿಕ ಮತ್ತು ಅನ್ವಯಿಕ ಅಧ್ಯಯನ

**ಡಾ. ಅನಿತ ಟಿ**
ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ಜ್ಞಾನಭಾರತಿ ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*ಸುಸ್ಥಿರ ಅಭಿವೃದ್ಧಿ ಎಂಬ ಪರಿಕಲ್ಪನೆ ಜಾಗತಿಕ ಮಟ್ಟದಲ್ಲಿ 20ನೇ ಶತಮಾನದಲ್ಲಿ ಪ್ರಮುಖ್ಯತೆಯನ್ನು ಪಡೆದಿದೆ. ಇದು ಪರಿಸರ, ಆರ್ಥಿಕತೆ ಮತು ಸಮಾಜದ ಸಮತೋಲನದ ಮೇಲೆ ಆಧಾರಿಸಿದೆ. ಮಾನವನ ಕಾರ್ಯಚಟುವಟಿಕೆಗಳು ಮತ್ತು ದೇಶದ ಅಭಿವೃದ್ಧಿಯು ಪ್ರಕೃತಿಯ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿರುವುದರಿಂದ ಪರ್ಯಾಯ ಜ್ಞಾನದ ವ್ಯವಸ್ಥೆಗಳ ಅವಶ್ಯಕತೆ ಹೆಚ್ಚಾಗಿದೆ ಹಾಗಾಗಿ ಈ ಸಂದರ್ಭದಲ್ಲಿ ಸ್ಥಳೀಯ ಜ್ಞಾನವು ಸುಸ್ಥಿರ ಅಭಿವೃದ್ಧಿಗೆ ಪರ್ಯಾಯ ದೃಷ್ಟಿಕೋನವನ್ನು ಒದಗಿಸುತ್ತದೆ. ಈ ಲೇಖನದಲ್ಲಿ ಸುಸ್ಥಿರ ಅಭಿವೃದ್ಧಿಯಲ್ಲಿ ಸ್ಥಳೀಯ ಜ್ಞಾನದ ಪಾತ್ರವನ್ನು ಜಾಗತಿಕ ಪರಿಸರ ಸಮಸ್ಯೆಗಳ ಹಿನ್ನಲೆಯಲ್ಲಿ ಪರ್ಯಾಯ ಮತ್ತು ಪರಿಣಾಮಕಾರಿ ವ್ಯವಸ್ಥೆಯಾಗಿ ಕಾರ್ಯಗತಗೊಳಿಸುವ ಒಂದು ಯೋಜನೆ ಎಂದು ಹೇಳಬಹುದು.*

**ಮುಖ್ಯಪದಗಳು (Keywords):** *ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ, ಸ್ಥಳೀಯ ಜ್ಞಾನ, ಅನ್ವಯಿಕ ಅಧ್ಯಯನ*

## ಪೀಠಿಕೆ

ಸ್ಥಳೀಯ ಜ್ಞಾನವು ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯನ್ನು ಆಳವಾಗಿ ರೂಪಿಸುತ್ತದೆ. ಇದು ಕೇವಲ ಒಂದು ಪರಂಪರೆಯ ಜ್ಞಾನವಲ್ಲ ಬದಲಾಗಿ ಪರಿಸರ, ಆರ್ಥಿಕತೆ ಮತ್ತು ಸಮಾಜದ ನಡುವೆ ಸಮತೋಲನ ಸಾಧಿಸುವ ಸಮಗ್ರ ವ್ಯವಸ್ಥೆಯಾಗಿದೆ. ಇಂದಿನ ಜಾಗತಿಕ ಚರ್ಚೆಗಳ ಕೇಂದ್ರ ಬಿಂದುವಾಗಿರುವ ಪರಿಸರದ ಹಾನಿ, ಹವಾಮಾನದ ಬದಲಾವಣೆ ಮತ್ತು ಸಂಪನ್ಮೂಲಗಳ ದರ್ಬಳಕೆಯ ಹಿನ್ನಲೆಯನ್ನು ಗಮನಿಸಬೇಕಾದ ಅನಿವಾರ್ಯತೆ ಇದೆ.

## ಅಧ್ಯಯನದ ಉದ್ದೇಶಗಳು

- ಸ್ಥಳೀಯ ಜ್ಞಾನದ ಸ್ವರೂಪವನ್ನು ವಿಶ್ಲೇಷಿಸುವುದು.
- ಸುಸ್ಥಿರ ಅಭಿವೃದ್ಧಿಯನ್ನು ಅರ್ಥೈಸುವುದು.
- ಆಧುನಿಕ ವಿಜ್ಞಾನಗಳ ನಡುವಿನ ಸಂಬಂಧವನ್ನು ಅಧ್ಯಯನ ಮಾಡುವುದು.

*Please cite this article as:* ಅನಿತ, ಟಿ. (2026). ಸುಸ್ಥಿರ ಅಭಿವೃದ್ಧಿಗೆ ಸ್ಥಳೀಯ ಜ್ಞಾನದ ಅನ್ವಯಿಕೆ : ತಾತ್ವಿಕ ಮತ್ತು ಅನ್ವಯಿಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 1–7

- ಭವಿಷ್ಯದಲ್ಲಿನ ಸವಾಲುಗಳು ಮತ್ತು ಅವಕಾಶಗಳನ್ನು ಗುರುತಿಸುವುದು.
- ಸ್ಥಳೀಯ ಜ್ಞಾನದ ಮೂಲಕ ಸವಾಲುಗಳಿಗೆ ಸಮರ್ಪಕ ಪರಿಹಾರಗಳನ್ನು ಸೂಚಿಸುವುದು.

**ಸಂಶೋಧನಾ ವಿಧಾನ**

- ಗುಣಾತ್ಮಕ ಸಂಶೋಧನಾ ವಿಧಾನ
- ದತ್ತಾಂಶಗಳ ಸಂಗ್ರಹಣೆ
- ದ್ವಿತೀಯ ಆಕರ ಮೂಲಗಳು (ಪುಸ್ತಕಗಳು, ಲೇಖನಗಳು, ಜರ್ನಲ್‌ಗಳು ಮತ್ತು ವರದಿಗಳು)
- ವಿಷಯ ವಿಶ್ಲೇಷಣೆ

ನಮ್ಮ ದೇಶವು ಕೃಷಿ ಪ್ರಧಾನ ದೇಶ. ದೇಶದ ಅಭಿವೃದ್ಧಿಯಲ್ಲಿ ಸ್ಥಳೀಯ ಜ್ಞಾನ ಎಂಬುದು ಧನಾತ್ಮಕ ಬೆಳೆವಣಿಗೆಯನ್ನು ಸಾಧಿಸಲು ಸಹಕಾರಿಯಾಗಿದೆ. ಸ್ಥಳೀಯ ಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ನಮ್ಮಲ್ಲಿರುವ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬಹುದು. ಇದರಿಂದ ದೇಶದ ಆರ್ಥಿಕ ವಲಯದಲ್ಲಿ ಪ್ರಗತಿ ಸಾಧಿಸಲು ಸಹಾಯಕವಾಗುತ್ತದೆ. ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ದೇಶಿಯ ಚರಿತ್ರೆಯನ್ನು ಗಮನಿಸಿದಾಗ ಸ್ಥಳೀಯ ಜ್ಞಾನದ ಬಳಕೆ ಯಾವ ರೀತಿಯಲ್ಲಿ ಆಗಿದೆ ಎಂಬುದು ತಿಳಿಯುತ್ತದೆ. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಕಲೆ ಮತ್ತು ಸಾಹಿತ್ಯದ ಕೊಡುಗೆಗೆ ಸ್ಥಳೀಯ ಜ್ಞಾನದ ಕೊಡುಗೆ ಅಪಾರವಾದುದು. ಸ್ಥಳೀಯ ಜ್ಞಾನದಲ್ಲಿ ಜನಪದರ ಸಂಪ್ರದಾಯಗಳು ಸಹ ಸೇರಿರುವುದನ್ನು ಗಮನಿಸಬೇಕಾಗುತ್ತದೆ. ಸ್ಥಳೀಯ ಸಂಪ್ರದಾಯಗಳು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿವೆ. ದೇಶಿಯ ಸ್ಥಳೀಯ ಜ್ಞಾನವು ಹಲವು ದೇಶಗಳ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಿವೆ. ಸಾಂಸ್ಕೃತಿಕ ಕೇಂದ್ರಗಳು ಪ್ರಪಂಚದ ಎಲ್ಲ ಕಡೆಗಳಲ್ಲಿಯೂ ಇರುವುದರಿಂದ ಒಂದು ದೇಶವನ್ನು ಪ್ರತಿನಿಧಿಸುವಲ್ಲಿ ಸ್ಥಳಿಯ ಜ್ಞಾನ ಮತ್ತು ಸಂಪ್ರದಾಯಗಳು ಮಹತ್ವ ಎನಿಸಿವೆ. ಸುಸ್ಥಿರ ಅಭಿವೃದ್ಧಿಯಲ್ಲಿ ಪರಿಸರದ ಮೇಲೆ ಋಣಾತ್ಮಕ ಪರಿಣಾಮಗಳನ್ನು ಕಡಿಮೆ ಮಾಡಲು ಮತ್ತು ಸಂಪೂರ್ಣವಾಗಿ ತಡೆಯಲು ಮತ್ತು ನಮ್ಮ ಆರ್ಥಿಕ ಚಟುವಟಿಕೆಗಳನ್ನು ಹೇಗೆ ಬದಲಾಯಿಸಬೇಕು? ಇದನ್ನು ಯಶಸ್ವಿಗೊಳಿಸಲು ಅಗತ್ಯವಾದ ಬುದ್ಧಿವಂತಿಕೆ ಮತ್ತು ಜ್ಞಾನ ನಮ್ಮೊಂದಿಗೆ ಇದೆಯಾ? ಎಂಬ ಪ್ರಶ್ನೆಗಳಿಗೆ ಸ್ಥಳೀಯ ಜ್ಞಾನವು ವಿವಿಧ ಮೂಲಗಳಿಂದ ಉತ್ತರಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವು ಗರಿಷ್ಠ ಪ್ರಮಾಣದಲ್ಲಿ ಉತ್ತರಿಸುತ್ತದೆ. ಸಾಂಪ್ರದಾಯಿಕ ಜ್ಞಾನವು ವಿಮರ್ಶಾತ್ಮಕ ಒಳನೋಟಗಳನ್ನು ನೀಡುತ್ತದೆ. ಹಾಗಾಗಿ ಸಾಂಪ್ರದಾಯಿಕ ಜ್ಞಾನವೂ ಪ್ರಸ್ತುತದಲ್ಲಿಯೂ ಅನ್ವಯವಾಗುತ್ತದೆ.

ಸಾಂಪ್ರದಾಯಿಕ ಜ್ಞಾನವನ್ನು ಆಧುನಿಕ ಭಾಷೆಯಲ್ಲಿ ಹೇಳುವುದಾದರೆ ಅದನ್ನು ದೇಶೀಯ ಜ್ಞಾನ ಎಂಬುದಾಗಿ ತಿಳಿಸಿದ್ದಾರೆ. ಮನುಷ್ಯ ತನ್ನ ಸುತ್ತಲಿನ ಆಗು–ಹೋಗುಗಳನ್ನು ಅರಿತು ಹೇಗೆ ತನ್ನ ಕುಟುಂಬದ ಅಭಿವೃದ್ಧಿಯಲ್ಲಿ ತೊಡಗುತ್ತಾನೋ ಅದೇ ರೀತಿ ಸ್ಥಳೀಯ ಜ್ಞಾನವನ್ನು ಬಳಸಿಕೊಂಡು ವ್ಯವಹರಿಸುವ ಜಾಣ್ಮೆಯ ಕಲೆಯನ್ನು ಕರಗತ ಮಾಡಿಕೊಂಡಿದ್ದಾನೆ. ಮನುಷ್ಯನ ಜೀವನ ಮಟ್ಟವು ಉತ್ತಮವಾಗಿರಬೇಕಾದರೆ

ಆತನಿಗೆ ವಿಜ್ಞಾನ ಮತ್ತು ವೈವಹಾರಿಕ ಜ್ಞಾನ ಅಗತ್ಯವಾಗಿರುತ್ತದೆ. ಸಾಂಪ್ರದಾಯಿಕ ಅಥವಾ ಸ್ಥಳೀಯ ಜ್ಞಾನ ಮತ್ತು ಸುಸ್ಥಿರ ಅಭಿವೃದ್ಧಿ ಎಂಬ ಪರಿಕಲ್ಪನೆಗಳು ತನ್ನದೇ ಆದ ದೃಷ್ಟಿಕೋನವನ್ನು ಹೊಂದಿದೆ. ಹಾಗಾಗಿ ಸ್ಥಳೀಯ ಜ್ಞಾನ ಮತ್ತು ಸುಸ್ಥಿರ ಅಭಿವೃದ್ಧಿ ಎಂದರೇನು? ಎಂಬುದನ್ನು ಪರಿಶೀಲಿಸಿದಾಗ ದೇಶಿಯ ಮತ್ತು ಸ್ಥಳೀಯ ಪ್ರದೇಶದಲ್ಲಿ ಒಂದು ಕಡೆ ನೆಲೆ ನಿಂತ ಜನರ ಆಲೋಚನೆ ಮತ್ತು ಅನುಭವಗಳನ್ನು ಒಟ್ಟಾರೆಯಾಗಿ ಜ್ಞಾನ ಎಂಬುದಾಗಿ ಹೇಳಬಹುದು.

ಮಾನವನ ಕಲ್ಯಾಣ ಮತ್ತು ಅಭಿವೃದ್ಧಿಯ ವಿವಿಧ ಕ್ಷೇತ್ರಗಳಿಗೆ ಸ್ಥಳೀಯ ಜ್ಞಾನ ಮತ್ತು ಅದರ ಕೊಡುಗೆಗಳ ನಡುವಿನ ಅಗತ್ಯತೆಯನ್ನು ಇಲ್ಲಿ ತಿಳಿಯಬೇಕಾಗುತ್ತದೆ. ಇದರ ಉದ್ದೇಶ ಸ್ಥಳೀಯ ಜ್ಞಾನವನ್ನು ಬಳಸಿಕೊಂಡು ಯಾವ ರೀತಿಯಲ್ಲಿ ಅಭಿವೃದ್ಧಿ ಹೊಂದಬಹುದು ಎಂಬುದನ್ನು ತಿಳಿಸುವುದೇ ಆಗಿದೆ. ವಿಜ್ಞಾನ ಮತ್ತು ತಂತ್ರಗಾರಿಕೆಯ ಬೆಳವಣಿಗೆಯಲ್ಲಿ ಸ್ಥಳೀಯ ಜ್ಞಾನದ ಸಂಪೂರ್ಣ ಬಳಕೆಯನ್ನು ಪ್ರಮುಖವಾಗಿ ಗುಪ್ತ ಸಾಮ್ರಾಜ್ಯದಲ್ಲಿ ಕಾಣಬಹುದು. ಸುಸ್ಥಿರ ಅಭಿವೃದ್ಧಿಗೆ ಸ್ಥಳೀಯ ಜ್ಞಾನವನ್ನು ತ್ವರಿತಗತಿಯಲ್ಲಿ ಬಳಕೆ ಮಾಡಿಕೊಳ್ಳುವ ಬದಲಿಗೆ ಯೋಚಿಸಿ ಮತ್ತು ಯೋಜಿಸುವ ಮೂಲಕ ಅದನ್ನು ಅನ್ವಯಿಸಿಕೊಳ್ಳುವುದು ಅಗತ್ಯ. ಜೊತೆಗೆ ಪರಿಸರದ ಮೇಲೆ ಯಾವುದೇ ರೀತಿ ಋಣಾತ್ಮಕ ಪರಿಣಾಮಗಳು ಬೀರದಂತೆ ಎಚ್ಚರ ವಹಿಸಬೇಕಾಗುತ್ತದೆ. ತ್ವರಿತಗತಿಯ ಅಭಿವೃದ್ಧಿಯ ಯೋಜನೆಯಲ್ಲಿ ಅಹಿತಕರ ನಿರ್ಧಾರ ತೆಗೆದುಕೊಳ್ಳದಂತೆ ಗಮನಹರಿಸಬೇಕು ಇದಕ್ಕೆ ಅಗತ್ಯವಾದ ಜ್ಞಾನ ಮತ್ತು ಬುದ್ಧಿವಂತಿಕೆ ಇರಬೇಕು. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳು ಎಷ್ಟು ಮುಂದುವರೆದಿವೆ ಎಂದರೆ, ಕ್ಷಣ ಮಾತ್ರದಲ್ಲಿ ಪ್ರಪಂಚದ ಎಲ್ಲಾ ಮಾಹಿತಿಗಳನ್ನು ಪಡೆಯಬಹುದು ಇದು ಸಾಧ್ಯವಾಗಿರುವುದು ಮನುಷ್ಯನ ಅತಿ ಸೂಕ್ಷ್ಮ ಬುದ್ಧಿವಂತಿಕೆಯ ಫಲ ಎನ್ನಬಹುದು. ಸ್ಥಳೀಯ ಜ್ಞಾನ ಎಂಬುದು ಮನುಷ್ಯನ ಬೌದ್ಧಿಕ ಮಟ್ಟದ ಚಾಣಾಕ್ಷತನವನ್ನು ತೋರಿಸುತ್ತದೆ. ಹಾಗಾಗಿ ಈ ಜ್ಞಾನವನ್ನು ಪ್ರಸ್ತುತದಲ್ಲಿ ಹೆಚ್ಚಾಗಿ ಕೃಷಿ ವಲಯ ಮತ್ತು ನೈಸರ್ಗಿಕ ವಲಯಗಳಲ್ಲಿ ಅನ್ವಯಿಸಿಕೊಳ್ಳುತ್ತಿದ್ದಾರೆ.

ಸ್ಥಳೀಯ ಜ್ಞಾನ ಎಂಬುದು ಒಂದು ನಿರ್ಧಿಷ್ಟತೆಯನ್ನು ಹೊಂದಿರುವುದರಿಂದ ಇದಕ್ಕೆ ಒಂದು ನಿರ್ಧಿಷ್ಟ ಸ್ಥಳ ಮತ್ತು ಅನುಭವದ ಗಣಿ ಸ್ಥಳೀಯ ಜನರ ಗುಂಪಿನಲ್ಲಿ ಬೇರೂರಿದೆ. ಹಾಗೂ ನಿರ್ಧಿಷ್ಟ ಸ್ಥಳದಲ್ಲಿ ವಾಸಿಸುವ ಜನರಿಂದ ಸ್ಥಳೀಯ ಜ್ಞಾನವು ಅದರದೇ ಆದ ಅನುಭವಗಳಿಂದ ಕೂಡಿರುತ್ತದೆ. ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಜನರು ತಮ್ಮದೇ ಆದ ಜ್ಞಾನವನ್ನು ಹೊಂದಿದ್ದು, ಅವರ ಆಹಾರ, ವೈದ್ಯ ಪದ್ಧತಿ, ಕೃಷಿ ಮತ್ತು ವ್ಯವಸಾಯದ ಪದ್ಧತಿಯಲ್ಲಿ ಭಿನ್ನತೆಯನ್ನು ಕಾಣಬಹುದು. ಪಾರಂಪಾರಿಕ ಜ್ಞಾನದಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಅಪಾರವಾದ ಬೇಡಿಕೆ ಇದೆ, ಇದು ಸಾಧ್ಯವಾಗಿರುವುದು ಸ್ಥಳೀಯ ಜ್ಞಾನದ ಕೊಡುಗೆ ಎಂದೇ ಹೇಳಬಹುದು. ನಮ್ಮ ದೇಶಕ್ಕೆ ಕೃಷಿಯೇ ಬೆನ್ನೆಲುಬು. ಹಾಗಾಗಿ ನಮ್ಮ ಭಾರತ ದೇಶದ ಸಂಸ್ಕೃತಿ ಎಷ್ಟು ಪ್ರಾಚೀನವಾದದ್ದೋ ಅಷ್ಟೇ ಪ್ರಾಚೀನತೆ ಕೃಷಿ ಪದ್ಧತಿಗೆ ಇದೆ. ಕೃಷಿಯನ್ನು ಕೇವಲ ಸೀಮಿತ ದೃಷ್ಟಿಯಲ್ಲಿ ನೋಡದೆ, ಪರ್ಯಾಯವಾಗಿ ವ್ಯವಸಾಯ, ತೋಟಗಾರಿಕೆ, ಬೇಸಾಯ ಇವುಗಳನ್ನು ಸಮ್ಮಿಶ್ರವಾಗಿ ಸೇರಿಸಬಹುದು. ಕೃಷಿ ಪದ್ಧತಿಯಲ್ಲಿ ಅನೇಕ ಬದಲಾವಣೆಗಳನ್ನು ಮಾಡುತ್ತಾ ಹೆಚ್ಚು ಇಳುವರಿಯನ್ನು ಪಡೆದು ಆರ್ಥಿಕ ಭದ್ರತೆ ಹೊಂದುತ್ತಿದ್ದಾರೆ. ಇದಕ್ಕೆ ಕಾರಣ ದೇಶಿಯ ಜ್ಞಾನವನ್ನು

ವೈಜ್ಞಾನಿಕ ರೀತಿಯಲ್ಲಿ ಬಳಸಿರುವುದರ ಪ್ರತಿಫಲವೇ ಹಸಿರು ಕ್ರಾಂತಿ, ಬಿಳಿ ಕ್ರಾಂತಿ ಹಾಗೂ ಹಳದಿ ಕ್ರಾಂತಿಯ ಬೆಳವಣಿಗೆ.

ಕೃಷಿ ವಿಜ್ಞಾನ ಎಂಬುದು ಆಧುನಿಕ ಯುಗದಲ್ಲಿ ಜಾರಿಗೆ ಬಂದಿದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ದೇಶಿಯ ಜ್ಞಾನದ ಸೊಗಡನ್ನು ಮುಂದುವರೆಸಿಕೊಂಡು ಹೊಗುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು. ಹಲವಾರು ದೊಡ್ಡದೊಡ್ಡ ಯಂತ್ರಗಳನ್ನು ಕೃಷಿಯಲ್ಲಿ ಬಳಕೆ ಮಾಡಿ ಅಧಿಕ ಇಳುವರಿಯನ್ನು ಪಡೆಯುತ್ತಿರುವುದು ಇದರ ಫಲವೇ ಆಗಿದೆ. ವಿಜ್ಞಾನ ಬೆಳೆದಷ್ಟು ಜ್ಞಾನದ ಶಾಖೆಗಳು ತೆರೆದುಕೊಳ್ಳುತ್ತಾ ಹೋಗುತ್ತದೆ. ಅದರಂತೆ ಸ್ಥಳೀಯ ಜ್ಞಾನದ ಅವಶ್ಯಕತೆಯೂ ಅಧಿಕವಾಗುತ್ತದೆ.

ಸ್ಥಳೀಯ ಜ್ಞಾನ ವ್ಯವಸ್ಥೆಗಳು ಪರಿಸರ ವ್ಯವಸ್ಥೆಗಳ ವಿಶಾಲ ದೃಷ್ಟಿಕೋನವನ್ನು ಹೊಂದಿದೆ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಹೇರಳವಾಗಿ ಹೊಂದಿದ್ದರೂ ಸಹ ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯು ಸ್ಥಳೀಯ ಜ್ಞಾನದ ಪ್ರಾಯೋಗಿಕ ಮತ್ತು ದೈನಂದಿನ ಜೀವನದ ಅಂಶಗಳನ್ನು ಗುರುತಿಸುವವರೆಗೂ ಗೌಣವಾಗಿಯೇ ಇತ್ತು. ಪಾಶ್ಚಾತ್ಯ ವಿಚಾರಗಳು ಕಲಿಕೆಯೊಂದಿಗೆ, ಕಲಿಕೆಯ ವಿಧಾನಗಳನ್ನು ಬದಲಾಯಿಸಿತು. ಹಾಗಾಗಿ ಇಂದು ಸ್ಥಳೀಯ ಜ್ಞಾನಕ್ಕೆ ಹಿನ್ನಡೆಯೆನಿಸಿದರೂ ಸಂಪೂರ್ಣವಾಗಿ ಈ ಜ್ಞಾನವನ್ನು ಕಡೆಗಣಿಸಲು ಸಾಧ್ಯವಿಲ್ಲ. ಕಾಲಗರ್ಭದಲ್ಲಿ ಚಕ್ರ ಉರುಳಿದಂತೆ ಹಳೆಯ ಜ್ಞಾನದ ಕೊಂಡಿಗಳು ಕವಲೊಡೆದುಕೊಳ್ಳುತ್ತಾ ಸಾಗುತ್ತವೆ. ಇದು ಪರಿಸರು ಮತ್ತು ಸಾಮಾಜಿಕ ಸುಸ್ಥಿರವಾದಂತ ಬದುಕಿನ ಮಾರ್ಗಗಳಿಗೂ ಅನ್ವಯವಾಗುತ್ತದೆ. ವಸಾಹತು ಶಾಹಿ ದೇಶಗಳಲ್ಲಿ ಸ್ಥಳೀಯ ಜ್ಞಾನವನ್ನು ನಿರ್ಲಕ್ಷಿಸಲಾಗಿತ್ತು ಮತ್ತು ಸ್ಥಳೀಯ ಜ್ಞಾನವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದರು. ಕೂಲಿ ಕಾರ್ಮಿಕರ ಶ್ರಮಕ್ಕೆ ಋಣಾತ್ಮಕವಾದ ಯೋಜನೆಗಳನ್ನು ರೂಪಿಸುತ್ತಿದ್ದರು. ಸ್ಥಳೀಯ ಜ್ಞಾನ ಎಂಬುದು ಕೇವಲ ಕೂಲಿ ಮಾಡುವವರಿಗೆ ಮಾತ್ರ ಸೀಮಿತವಾದುದು ಅದನ್ನು ಅಭಿವೃದ್ಧಿಯ ಯೋಜನೆಗಳಿಗೆ ಅನ್ವಯ ಮಾಡಲು ಸಾಧ್ಯವಾಗುವುದಿಲ್ಲ ಎಂದು ಋಣಾತ್ಮಕ ನೆಲೆಯಲ್ಲಿ ಭಾವಿಸಿದ್ದ ಒಂದು ಗುಂಪಿಗೆ ಧನಾತ್ಮಕ ಬೆಳವಣಿಗೆಯ ಪ್ರತಿಫಲ ತೋರಿಸಿದ್ದ ದೇಶಿಯ ಜ್ಞಾನದ ಹೆಮ್ಮೆ.

ಇಂತಹ ಋಣಾತ್ಮಕ ನಿಲುವು ವಸಾಹತು ಶಾಹಿಗಳಲ್ಲಿ ಬದಲಾಗಲು ಪಾಶ್ಚಿಮಾತ್ಯರ ದೃಷ್ಟಿಕೋನಕ್ಕೆ ದೇಶಿಯ ವಿದ್ವಾಂಸರುಗಳ ಮತ್ತು ಸಂಶೋಧಕರ ಸಹಕಾರವೇ ಆಗಬೇಕಾಯಿತು. ಮೊದ ಮೊದಲು ಪಾಶ್ಚಿಮಾತ್ಯರು ಸ್ಥಳೀಯ ಜನರ ಜ್ಞಾನದ ವಿಚಾರಗಳನ್ನು ಕಲೆಹಾಕಲು ಪ್ರಾರಂಭಿಸಿ ಅದನ್ನು ಕಾರ್ಯರೂಪಕ್ಕೆ ತರಲಾರಂಭಿಸಿದರು ನಂತರ ಅಂತಹ ವಿಚಾರ ಮತ್ತು ವಿಧಾನಗಳ ಬಗ್ಗೆ ವಿಚಾರ ಸಂಕಿರಣ ಮತ್ತು ಅಭಿವೃದ್ಧಿಯ ಸಮ್ಮೇಳನಗಳಲ್ಲಿ ಭಾಗವಹಿಸುವ ಮೂಲಕ ಹಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾರಂಭಿಸಿದರು. ನಂತರ ಅಂತಹ ವಿಧಾನಗಳನ್ನು ಪ್ರಯೋಗಕ್ಕೆ ಅಂದರೆ ಪ್ರಾಥಮಿಕ ವಲಯಕ್ಕೆ ಅನ್ವಯ ಮಾಡಲಾಯಿತು. ಫಲಿತಾಂಶ ಉತ್ತಮವಾಗಿದ್ದರಿಂದ ಸ್ಥಳೀಯ ಜ್ಞಾನದತ್ತ ಜಗತ್ತು ಮುಖ ಮಾಡಿದೆ. ಸೈದ್ಧಾಂತಿಕ ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸ್ಥಳೀಯ ಜ್ಞಾನದ ವ್ಯವಸ್ಥೆಯನ್ನು ಸೇರಿಸಲಾಗುತ್ತಿದೆ. ಹಿಂದೆ ಅನೇಕ ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರು ಸ್ಥಳೀಯ ಜ್ಞಾನವನ್ನು ಸರಳವಾಗಿ ಪರಿಗಣಿಸಿ ದೈನಂದಿನ ಕಾರ್ಯಗಳಲ್ಲಿ ಪ್ರಯೋಗಿಸುತ್ತಿದ್ದರು ಆದರೆ ಆ ಜ್ಞಾನದ ಕಾರ್ಯಾಚರಣೆಯನ್ನು

ಲಿಖಿತ ರೂಪದಲ್ಲಿ ದಾಖಲಿಸಲಾಗಲಿಲ್ಲ ಹಾಗಾಗಿ ಸ್ಥಳೀಯ ಜ್ಞಾನದ ಬಗ್ಗೆ ನಿರಾಸಕ್ತಿ ವ್ಯಕ್ತವಾಗುತ್ತಿತ್ತು. ಆದರೆ ಇತ್ತೀಚೆಗೆ ಕಾರ್ಮಿಕರು, ಕೃಷಿ ಸಂಶೋಧಕರು, ಅಭಿವೃದ್ಧಿ ಸಾಧಕರು ಮತ್ತು ಯೋಜನೆಗಳನ್ನು ರೂಪಿಸುವವರು ಸ್ಥಳೀಯ ಜ್ಞಾನದ ಬಗ್ಗೆ ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ. ಇದರಿಂದ ಸ್ಥಳೀಯ ಸಂಪನ್ಮೂಲಗಳು, ಗ್ರಾಮಗಳ ನಿರ್ವಹಣೆ, ಅರಣ್ಯ ಪ್ರದೇಶದ ವಿಸ್ತರಣೆ ಮತ್ತು ಕೃಷಿ ಭೂಮಿಯ ಫಲವತ್ತತೆಗೆ ನಿರ್ದಿಷ್ಟವಾದ ಗಮನ ನೀಡಲಾಗುತ್ತಿದೆ.

ಪ್ರಸ್ತುತ ದಿನಗಳಲ್ಲಿ ತಾಂತ್ರಿಕತೆಗೆ ಹೆಚ್ಚಿನ ಗಮನ ನೀಡಿ ತ್ವರಿತಗತಿಯಲ್ಲಿ ಅಹಿತಕರ ಅಭಿವೃದ್ಧಿಯತ್ತಾ ಸಾಗುತ್ತಿರುವುದು ಮುಂದಿನ ದಿನಗಳಲ್ಲಿನ ಅಪಾಯಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಸ್ಥಳೀಯ ಜ್ಞಾನ ಎಂಬುದು ಹೆಚ್ಚಾಗಿ ಸಾಮಾಜಿಕ ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ ಮಾರ್ಗಗಳ ಬಗ್ಗೆ ಅಮೂಲ್ಯವಾದ ಜ್ಞಾನವನ್ನು ಸಾಗುತ್ತದೆ. ಸ್ಥಳೀಯ ಜ್ಞಾನ ಒಂದು ದೇಶದಲ್ಲಿನ ಸ್ಥಳೀಯ ಸಂಪ್ರದಾಯಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಮಾಡುತ್ತದೆ. ದೇಶದ ಸಾಂಸ್ಕೃತಿಕ ಮತ್ತು ತಾಂತ್ರಿಕ ಸಮನತೋಲನ ಕಾಪಾಡಿಕೊಳ್ಳಲು ಅಗತ್ಯವಾಗಿರಬೇಕಾದ ವಿಧಾನಗಳನ್ನು ತಿಳಿಸುತ್ತದೆ. ಸಂಸ್ಕೃತಿ ಎಂಬುದನ್ನು ಪರಿಸರದ ಮತ್ತು ಸಮುದಾಯವನ್ನು ಉಳಿಸಿಕೊಳ್ಳಲು ಸಹಾಯ ಮಾಡುವ ಸಾಂಪ್ರದಾಯಿಕ ಸಂಸ್ಥೆಗಳಿಂದ ವ್ಯಾಖ್ಯಾನಿಸಲಾಗಿದೆ. ಇದು ಆಧುನಿಕ ಅಭಿವೃದ್ಧಿ ಎಂದು ಕರೆಯಲ್ಪಡುವ ವಿನಾಶಕಾರಿ ಅವಲಂಬನೆಯ ಬದಲಿಗೆ ರಚನಾತ್ಮಕ ಅವಲಂಬನೆಯ ಪರಿಸ್ಥಿಯನ್ನು ಉತ್ತೇಜಿಸುತ್ತದೆ.

ಇಂತಹ ಜ್ಞಾನವು ಆರೋಗ್ಯಕರ ಅಭಿವೃದ್ಧಿಯನ್ನು ಸಾಧಿಸಲು ಸಹಾಯಕವಾಗುತ್ತದೆ. ಸ್ಥಳೀಯ ಸಂಸ್ಕೃತಿ ಮತ್ತು ನೀತಿ ನಿರೂಪಣೆಯ ಭಾಗವಾಗಿರುವ ವಿವಿಧ ರೀತಿಯ ಪುರಾಣಗಳು, ನಿಷೇಧಗಳು, ನಿಯಮಗಳು ಮತ್ತು ನಿಬಂಧನೆಗಳಲ್ಲಿ ಸ್ಥಳೀಯ ಜ್ಞಾನದ ಪುರಾವೆಗಳು ಕಂಡುಬರುತ್ತವೆ.

ಸ್ಥಳೀಯ ಜ್ಞಾನದ ಪೀಳಿಗೆಯು ರೂಪಾಂತರ ಮತ್ತು ಅದನ್ನು ಬಳಸಿಕೊಳ್ಳುವಂತಹ ಸಂಸ್ಕೃತಿಯಿಂದ ಹೆಚ್ಚು ಪ್ರಭಾವಿತವಾಗಿರುತ್ತದೆ. ಇದು ಹಲವು ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಭೌಗೋಳಿಕ ಸಂದರ್ಭಗಳು ಸ್ಥಳೀಯ ಜ್ಞಾನವನ್ನು ಕೇಂದ್ರೀಕರಿಸಿ ಅಭಿವೃದ್ಧಿ ಹೊಂದಲು ಸಹಕಾರಿಯಾಗಿದೆ. ಆದ್ದರಿಂದ ಸ್ಥಳೀಯ ಜ್ಞಾನ ವ್ಯವಸ್ಥೆಗಳು ಹೆಚ್ಚಿನ ವೈವಿಧ್ಯತೆಯನ್ನು ತೋರಿಸುತ್ತದೆ ಮತ್ತು ಜನಾಂಗೀಯ ಗುಂಪುಗಳಲ್ಲಿ ಮಾತ್ರವಲ್ಲದೆ ಸ್ಥಳಗಳಲ್ಲೂ ವಿಭಿನ್ನ ಸಂಸ್ಕೃತಿಗಳಲ್ಲಿನ ಸ್ಥಳೀಯ ಜ್ಞಾನವನ್ನು ಅರ್ಥ ಮಾಡಿಕೊಳ್ಳಲು ಮತ್ತು ಹೋಲಿಕೆ ಮಾಡಲು ಕೆಲವು ಮಾರ್ಗಗಳನ್ನು ಹಾಕಿಕೊಳ್ಳಬಹುದು. ಒಂದೇ ರೀತಿಯ ವಿಷಯಗಳಲ್ಲಿ ವಿಭಿನ್ನ ಜ್ಞಾನವನ್ನು ಸಂಪಾದಿಸುವುದು, ವಿಭಿನ್ನ ರೀತಿಯ ವಿಷಯಗಳ ಬಗ್ಗೆ ವಿಭಿನ್ನ ರೀತಿಯಲ್ಲಿನ ಜ್ಞಾನವನ್ನು ಎದುರು ನೋಡುವುದು, ವಿಭಿನ್ನ ವಿಧಾನಗಳ ಮೂಲಕ ಸ್ಥಳೀಯ ಜ್ಞಾನವನ್ನು ಸಂಘಟಿಸುವ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಹಾಗೂ ಸ್ಥಳೀಯ ಜ್ಞಾನವನ್ನು ಸಂರಕ್ಷಿಸುವ ಮತ್ತು ಪರಿವರ್ತಿಸುವಂತಹ ವಿಭಿನ್ನ ವಿಧಾನಗಳನ್ನು ಅಳವಡಿಸಿಕೊಳ್ಳುವುದು.

ಹೀಗೆ ಕೆಲವು ಮಾರ್ಗೋಪಾಯಗಳನ್ನು ಅನುಸರಿಸುವುದರಿಂದ ಸ್ಥಳೀಯ ಜ್ಞಾನವನ್ನು ಹೆಚ್ಚಾಗಿ ಗಳಿಸಲು ಸಾಧ್ಯವಾಗುತ್ತದೆ. ಸುಸ್ಥಿರ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ಥಳೀಯ ಜ್ಞಾನದ ಬಳಕೆ ಹೇಗೆ ಸಾಧ್ಯವಾಗುತ್ತದೆ ಎಂಬುದನ್ನು ಪ್ರಸ್ತುತ ದಿನಗಳಲ್ಲಿ ಪ್ರಯೋಗಾತ್ಮಕ ನೆಲೆಯಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ.

ಸುಸ್ಥಿರ ಅಭಿವೃದ್ಧಿಗಾಗಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಭಾಗವಹಿಸುವ ವಿಧಾನಗಳ ಮೌಲ್ಯವನ್ನು ಬಹುತೇಕ ಎಲ್ಲಾ ಅಭಿವೃದ್ಧಿಯ ಆಯೋಜಕರುಗಳು ದೇಶಿಯ ನೆಲೆಯ ಜ್ಞಾನವನ್ನು ಗುರುತಿಸುತ್ತಿದ್ದಾರೆ. ಹಾಗೆ ಸ್ಥಳೀಯ ಜ್ಞಾನ ತಳಮಟ್ಟದ ನಿರ್ಧಾರವನ್ನು ತೆಗೆದುಕೊಳ್ಳುವಂತಹ ಆಧಾರವನ್ನು ಒದಗಿಸುತ್ತದೆ. ಇದು ಪರಿಸರ ವಲಯಗಳು, ನೈಸರ್ಗಿಕ ಸಂಪನ್ಮೂಲಗಳು, ಕೃಷಿ, ಜಲಚರಗಳು, ಅರಣ್ಯ ಮತ್ತು ಆಟದ ನಿರ್ವಹಣೆಯಲ್ಲಿ ಸ್ಥಳೀಯ ಜ್ಞಾನವು ಈ ಹಿಂದಿನದಕ್ಕಿಂತ ಹೆಚ್ಚು ಅತ್ಯಾಧುನಿಕವಾಗುತ್ತದೆ. ಅಲ್ಲದೆ ಈ ಜ್ಞಾನವು ನೈಸರ್ಗಿಕ ಮತ್ತು ಸಾಮಾಜಿಕವಾಗಿ ಸದೃಢವಾಗಿರುವ ಅಭಿವೃದ್ಧಿಗೆ ಹೊಸ ನಮೂನೆ ಅಥವಾ ಮಾದರಿಗಳನ್ನು ನೀಡುತ್ತದೆ. ಆದ್ದರಿಂದ ಸ್ಥಳೀಯ ಜ್ಞಾನದೊಂದಿಗೆ ಅವುಗಳ ಮೂಲಕ ಕಾರ್ಯನಿರ್ವಹಿಸುವ ಅಭಿವೃದ್ಧಿ ಚಟುವಟಿಕೆಗಳು ಮತ್ತು ಯೋಜನೆಗಳ ಮೇಲೆ ಪ್ರಯೋಜನ ಹೊಂದಿರುವುದು ಸತ್ಯವೆನಿಸಿದೆ.

ಸ್ಥಳೀಯ ಜ್ಞಾನ ಎಂಬುದು ವೈಜ್ಞಾನಿಕವಾದ ಒಂದು ಶ್ರೇಷ್ಠ ಸಂಸ್ಕೃತಿಯಿಂದ ಅವೈಜ್ಞಾನಿಕ ಆಚರಣೆ ಮತ್ತು ಸಂಪ್ರದಾಯಗಳನ್ನು ಒಳಗೊಂಡಿರುತ್ತದೆ. ಸಾಂಪ್ರದಾಯಿಕ ಬಹು ಸಂಸ್ಕೃತಿಗಳ ಗುಣಲಕ್ಷಣಗಳನ್ನು ಅಪೇಕ್ಷಣೀಯ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿನ ಕೃಷಿ ಸಂಶೋಧಕರು ಆ ದೇಶಗಳಿಗೆ ಹಸಿರು ಕ್ರಾಂತಿಯ ಪರಿಕಲ್ಪನೆಯನ್ನು ಪರಿಚಯಿಸುವುದರೊಂದಿಗೆ ಅಭಿವೃದ್ಧಿಗೊಂಡು ನಂತರದಲ್ಲಿ ಸ್ಥಳೀಯ ಜ್ಞಾನವನ್ನು ನಿರ್ಲಕ್ಷಿಸಿದ್ದಾರೆ. ಆದರೆ ಇತ್ತೀಚೆಗೆ ಬಹುಮುಖ ಬೇಸಾಯ (ಪಾಲಿಕಲ್ಚರ್) ಪದ್ಧತಿಗಳಿಗೆ ಸಂಬಂಧಿಸಿದಂತೆ ಹಲವು ಸಂಶೋಧನೆಗಳು ಯಶಸ್ವಿಯಾಗಿ ಮತ್ತೆ ಕೆಲವು ಪ್ರಯೋಜನಗಳು ಉಪಯುಕ್ತವಾಗಿರುವುದನ್ನು ಸ್ಪಷ್ಟವಾಗುತ್ತಿವೆ. ಬಹುಮುಖ ಬೇಸಾಯ ಪದ್ಧತಿ ಎಂಬುದು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಜಾರಿಯಲ್ಲಿರುವ ಸುಸ್ಥಿರ ಕೃಷಿ ಪದ್ಧತಿಯಾಗಿದೆ. ಈ ಪದ್ಧತಿಯು ಸಮರ್ಥವಾದ ಗುಣ ಲಕ್ಷಣಗಳನ್ನು ಹಾಗೂ ವೈವಿಧ್ಯತೆಯನ್ನು ಹೊಂದಿದೆ. ಸ್ಥಳೀಯ ಜ್ಞಾನ ಎಂಬುದು ಆಹಾರದಲ್ಲಿ ವೈವಿಧ್ಯತೆ, ಅಧಿಕ ಆದಾಯ, ಅಧಿಕ ಉತ್ಪಾದನೆ, ಉತ್ಪಾದನಾ ಸ್ಥಿರತೆ, ಕೈಗಾರಿಕೆಗಳಲ್ಲಿನ ಅಪಾಯಗಳನ್ನು ಕಡಿಮೆ ಮಾಡುವುದು, ಬೆಳೆ ಫಸಲಿಗೆ ಹತ್ತುವ ಕೀಟ ಮತ್ತು ತಗುಲುವ ರೋಗಗಳು ಹರಡದಂತೆ ತಡೆಯುವುದು, ಕಾರ್ಖಾನೆಗಳಲ್ಲಿ ಕಾರ್ಮಿಕರ ಸಮರ್ಥ ಬಳಕೆ, ಸೀಮಿತ ನೈಸರ್ಗಿಕ ಸಂಪನ್ಮೂಲಗಳೊಂದಿಗೆ ಉತ್ಪಾದನೆಯನ್ನು ಅಧಿಕ ಮತ್ತು ಕಡಿಮೆ ಮಟ್ಟದ ತಂತ್ರಜ್ಞಾನದ ಅಡಿಯಲ್ಲಿ ಆದಾಯವನ್ನು ಗರಿಷ್ಠಗೊಳಿಸುವುದು. ಹೀಗೆ ಇನ್ನು ಅನೇಕ ಸುಸ್ಥಿರ ಗುಣಲಕ್ಷಣಗಳನ್ನು ಹೊಂದಿದೆ. ಸ್ಥಳೀಯ ಜ್ಞಾನದ ಮೌಲ್ಯವು ಕೇವಲ ಕೃಷಿ, ನೈಸರ್ಗಿಕ ಮತ್ತು ಜೀವ ವೈವಿಧ್ಯತೆಗೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ಶಿಕ್ಷಣ, ವೈದ್ಯಕೀಯ ಮುಂತಾದವುಗಳಲ್ಲಿ ಇದು ಅಪಾರ ಸ್ಥಿರತೆಯನ್ನು ಹೊಂದಿದೆ. ಸ್ಥಳೀಯ ಜನರ ಸಾಂಪ್ರದಾಯಿಕ ಜ್ಞಾನವು ಔಪಚಾರಿಕ ಶಿಕ್ಷಣದ ಮಾದರಿಯಲ್ಲಿ ಸಮತೋಲಿತ ಮತ್ತು ಸ್ಥಳೀಯ ಸಮುದಾಯಕ್ಕೆ ಸ್ವೀಕಾರಾರ್ಹ ಮಾದರಿಯಾಗಿದೆ. ಇದು ಅನೇಕ ತಲೆಮಾರುಗಳಿಂದ ಸಂಗ್ರಹವಾದ ಜ್ಞಾನದಿಂದ ಕ್ರಮೇಣ ಅಭಿವೃದ್ಧಿ ಹೊಂದಿದ ಶಿಕ್ಷಣ ವ್ಯವಸ್ಥೆಯಾಗಿದೆ.

ಸ್ಥಳೀಯ ಜ್ಞಾನದ ಸವಾಲುಗಳು ಮತ್ತು ಸಲಹೆಗಳನ್ನು ನೋಡುವುದಾದರೆ, ಆಧುನೀಕರಣ, ಸ್ಥಳೀಯ ಜ್ಞಾನದ ಕಳವು, ದಾಖಲಾತಿಯ ಕೊರತೆ ಮತ್ತು ನೀತಿ ಮತ್ತು ಯೋಜನೆಯನ್ನು ರೂಪಿಸುವಲ್ಲಿನ

ಸಮಸ್ಯೆಗಳಿವೆ ಇನ್ನು ಈ ಸಮಸ್ಯೆಗಳಿಗೆ ಕೆಲವು ಸಲಹೆಗಳನ್ನು ನೀಡುವುದಾದರೆ, ಸ್ಥಳೀಯ ಜ್ಞಾನವನ್ನು ದಾಖಲಿಸುವುದು, ಶಿಕ್ಷಣದಲ್ಲಿ ಸ್ಥಳೀಯ ಜ್ಞಾನವನ್ನು ಅಳವಡಿಸುವುದು, ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು ಮತ್ತು ವೈಜ್ಞಾನಿಕ ಸಂಯೋಜನೆಗಳ ಮೂಲಕ ಸ್ಥಳೀಯ ಜ್ಞಾನವನ್ನು ಮತ್ತು ಅದರ ಅಭಿವೃದ್ಧಿಯನ್ನು ಪಡೆಯಲು ಸಾಧ್ಯವಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಸ್ಥಳೀಯ ಜ್ಞಾನ ಎಂಬುದು ಜನರಲ್ಲಿ ಇರುವಂತಹ ಜ್ಞಾನದ ವ್ಯವಸ್ಥೆಯಿಂದ ಕಲಿಯಬೇಕಾದುದ್ದು ಬಹಳಷ್ಟಿದೆ ಎಂಬುದು ಸ್ಪಷ್ಟವಾಗುತ್ತದೆ. ಪರಿಸರ ಸಂರಕ್ಷಣೆಯಲ್ಲಿ ಸ್ಥಳೀಯ ಸಮುದಾಯಗಳು ಅರಣ್ಯ, ಜಲ ಮತ್ತು ಜೀವ ವೈವಿಧ್ಯತೆಯನ್ನು ಸಂರಕ್ಷಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಕೃಷಿ ಕ್ಷೇತ್ರದಲ್ಲಿ ಜೈವಿಕ ಕೃಷಿ, ಸ್ಥಳೀಯ ತಳಿಗಳು ಮತ್ತು ಆಹಾರ ಬೀಜಗಳ ಸಂರಕ್ಷಣೆ ಮತ್ತು ಹವಾಮಾನ ಹೊಂದಾಣಿಕೆ, ಜಲ ನಿರ್ವಹಣೆಯಲ್ಲಿ ಪಾರಂಪಾರಿಕ ನೀರಾವರಿ ವ್ಯವಸ್ಥೆಗಳನ್ನು ಪಾಲಿಸುವುದು ಮತ್ತು ಮಳೆ ನೀರಿನ ಸಂಗ್ರಹಣೆ ಮಾಡುವುದರ ಜ್ಞಾನವನ್ನು ಮುಂದುವರಿಸುವುದು ಅವಶ್ಯವಾಗಿದೆ. ಹಾಗಾಗಿ ಸ್ಥಳೀಯ ಜ್ಞಾನದ ಕಡೆಗೆ ಶೈಕ್ಷಣಿಕ ವಲಯದವರು, ನೀತಿ ನಿರೂಪಕರು, ಯೋಜನೆ ರೂಪಿಸುವಂತಹ ಯೋಜಕರು ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾದ ಅನಿವಾರ್ಯತೆ ಇದೆ.

**ಆಧಾರ ಗ್ರಂಥಗಳು**


- ಧನ್ಯಕುಮಾರ್ ಇಚಾರಿ. (2015). *ಜೈನ ವೈದ್ಯಕೀಯ ಪರಂಪರೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಈಶ್ವರಪ್ಪ, ಎಂ.ಜಿ. (2010). *ಚಿತ್ರದುರ್ಗ ಜಿಲ್ಲೆಯ ವೈವಸಾಯ ಜಾನಪದ.* ಅನ್ನಪೂರ್ಣ ಪ್ರಕಾಶನ.
- ಗುರುಪ್ರಸಾದ್, ಸಿ.ಟಿ. (2016). *ಪಾರಂಪರಿಕ ಜ್ಞಾನ: ಕೃಷಿ ಆಚರಣೆಗಳು.* ಕನ್ನಡ ವಿಶ್ವವಿದ್ಯಾಲಯ.
- ಹುರುಳಿ ಐ.ಎನ್. (2000). *ಕನ್ನಡದಲ್ಲಿ ವೈದ್ಯಶಾಸ್ತ್ರದ ಹಸ್ತ ಪ್ರತಿಗಳು.* ಸಾಂಸ್ಕೃತಿಕ ನಿರ್ವಚನ.
- ಮಂಜುನಾಥ ಬೇವಿನಕಟ್ಟೆ. (2016). *ಜಾನಪದ ಕರ್ನಾಟಕ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
- ಪುರುಷೋತ್ತಮ ಬಿಳಿಮಲೆ. (2009). *ಕೂಡುಕಟ್ಟು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- Ellen, R., & Harris, H. (n.d.). *Concepts of indigenous environmental knowledge in scientific and development studies literature: A critical assessment*.
- Fernandez, M. E. (n.d.). *Gender and indigenous knowledge*. *Indigenous Knowledge and Development Monitor*.
- Mishra, S. (n.d.). *Women's indigenous knowledge of forest management in Orissa, India*.
- Rajasekharan, B. (n.d.). *Indigenous natural resource management systems for sustainable agricultural development*.
- World Commission on Environment and Development. (1987). *Our common future*. Oxford University Press.